**ಸಿ. ಸಿ. ನಂ. 486/2023**

**ಪಿ ಡಬ್ಲ್ಯೂ: 1**

**ಸಾಕ್ಷಿಯು ದಿನಾಂಕ:** 05-07-2025 **ರಂದು ವಿಚಾರಣೆಗಾಗಿ ಹಾಜರಾಗಿದ್ದು ಅವರಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**<u>ಪಾಟಿ ಸವಾಲು: ಆರೋಪಿತರ ಪರ ಶ್ರೀ ಕೆ ಎಸ್ ಎಂ., ವಕೀಲರಿಂದ</u>**

ಚಾಸಾ **-6** ರಿಂದ **9** ಮತ್ತು **12** ರವರು ಅಪರಾಧ ವಿಭಾಗದಲ್ಲಿಯೇ ಹೆಚ್ಚಿನ ಕೆಲಸ ಮಾಡಿರುತ್ತಾರೆ ಅಂದರೆ ಸರಿ. ದೂರನ್ನು ಟೈಪ್ ಮಾಡಿಸಿ ಕೊಟ್ಟಿರುತ್ತೇನೆ ಅಂದರೆ ಸರಿ. ದೂರನ್ನು ಪಂಚನಾಮೆ ಮಾಡಿದ ಸ್ಥಳದಲ್ಲಿಯೇ ಟೈಪ್ ಮಾಡಿಸಿರುತ್ತೇನೆ. ಸದರಿ ದೂರನ್ನು ಎಲ್ಲಿ ಪ್ರಿಂಟ್ ತೆಗೆಯಲಾಯಿತು ಎಂದು ತನಿಖಾಧಿಕಾರಿಗೆ ಗೊತ್ತಿರುತ್ತದೆ. ನಾನು ದೂರು ನೀಡಿದಾಗ ಆರಕ್ಷಕ ನಿರೀಕ್ಷಕರು ಠಾಣಾಧಿಕಾರಿಯಾಗಿದ್ದರು. ದೂರು ನೀಡುವುದಕ್ಕೂ ಮೊದಲೇ ಪಂಚನಾಮೆ ಮಾಡಲಾಗಿತ್ತು ಅಂದರೆ ಸರಿ. ಪಂಚರ ಹೆಸರುಗಳು ದೂರು ನೀಡುವುದಕ್ಕೂ ಮೊದಲೇ ಗೊತ್ತಾಗಿತ್ತು ಅಂದರೆ ಸರಿ. ನನ್ನ ದೂರಿನಲ್ಲಿ ಪಂಚರ ಹೆಸರುಗಳನ್ನು ಬರೆದಿಲ್ಲ ಅಂದರೆ ಸರಿ.

ದಿ: **18-10-2022** ರಂದು ಗಸ್ತು ತಿರುಗಲು ನಾನೊಬ್ಬನೇ ಹೋಗಿದ್ದೆ. ಗಸ್ತು ತಿರುಗುವಾಗ ಒಂದು ಪಾಯಿಂಟ್ ನಿಂದ ಇನ್ನೊಂದು ಪಾಯಿಂಟ್ ಗೆ ಹೋಗಲು **15** ರಿಂದ **20** ನಿಮಿಷ ಬೇಕಾಗುತ್ತದೆ. ಪೋಲಿಸ ಠಾಣೆಯಿಂದ ಎಂ ಜೆ ನಗರಕ್ಕೆ **10-15** ನಿಮಿಷಗಳಲ್ಲಿ ಹೋಗಬಹುದು. ಎಂ ಜೆ ನಗರಕ್ಕೆ ಹೋಗಿ ಠಾಣೆಗೆ ಹಿಂತಿರುಗಲು ಸುಮಾರು ಅರ್ಧ ಗಂಟೆ ಸಮಯ ಹಿಡಿಯುತ್ತದೆ ಅಂದರೆ ಸರಿ. ಎಸ್ ಆರ್ ನಗರ ಮತ್ತು ಚಪ್ಪರದಹಳ್ಳಿ ಪ್ರದೇಶಗಳಿಗೆ ಹೋಗಿ ಬರಲು **15** ನಿಮಿಷ ಬೇಕಾಗುತ್ತದೆ. ಮಾಹಿತಿ ಬಂದಾಗ ನಾನು ಕಾಮಧೇನು ಸ್ವೀಟ್ಸ ಕಾರ್ನರ್ ಬಳಿ ಇದ್ದೆ.

ಸದರಿ ಸ್ವೀಟ್ ಕಾರ್ನರ್ ಪೋಲಿಸ ಠಾಣೆಗೆ ಬಹಳ ಹತ್ತಿರದಲ್ಲಿದೆ ಅಂದರೆ ಸರಿ. ಠಾಣೆಯಲ್ಲಿ ಆರಕ್ಷಕ ನಿರೀಕ್ಷಕರು ಮತ್ತು ಸಿಬ್ಬಂದಿಗಳು ಇದ್ದರು. ಎಷ್ಟು ಸಿಬ್ಬಂದಿಗಳು ಇದ್ದರು ಎಂದು ಸಂಖ್ಯೆ ಹೇಳಲು ಆಗುವುದಿಲ್ಲ. ಸಿಬ್ಬಂದಿಗಳ ಪೈಕಿ ಇಂತಹ ಸಿಬ್ಬಂದಿ ಸಮವಸ್ತ್ರ ಧರಿಸಿದ್ದ ಮತ್ತು ಇಂತಹ ಸಿಬಬಂದಿ ಸಮವಸ್ತ್ರ ಧರಿಸಿರಲಿಲ್ಲ ಎಂದು ನಿಖರವಾಗಿ ಹೇಳಲು ಆಗುವುದಿಲ್ಲ.

ನಾವು ದಾಳಿಗೆ ಹೋದಾಗ ನನ್ನೊಂದಿಗೆ ಬಂದಿದ್ದ ಸಿಬ್ಬಂದಿಗಳೆಲ್ಲಾ ಮಪ್ತಿಯಲ್ಲಿದ್ದರು. ಪಂಚರನ್ನು ಬಸ್ ನಿಲ್ದಾಣದಲ್ಲಿರುವ ಬೀಡಾ ಅಂಗಡಿ ಹತ್ತಿರದಿಂದ ಕರೆಸಿರುತ್ತೇನೆ. ಬಸ್ ನಿಲ್ದಾಣದಲ್ಲಿ ಸಾಕಷ್ಟು ಬೀಡಾ ಅಂಗಡಿಗಳು ಇರುತ್ತವೆ ಅಂದರೆ ಸರಿ. ಬಸ್ ನಿಲ್ದಾಣದಲ್ಲಿ ಯಾವಾಗಲೂ ಜನಜಂಗುಳಿ ಇರುತ್ತದೆ ಅಂದರೆ ಸರಿ. ಬಸ್ ನಿಲ್ದಾಣದ ಕಚೇರಿಯ ಹತ್ತಿರ ಸಾಕಷ್ಟು ಜನ ಸಿಬ್ಬಂದಿಗಳು ಮತ್ತು ಅಮಾಲಿ ಕೆಲಸದವರು ಓಡಾಡುತ್ತಾರೆ ಅಂದರೆ ಸರಿಯಲ್ಲ.

ಬಸ್ ನಿಲ್ದಾಣದಲ್ಲಿ ಇಬ್ಬರು ವ್ಯಕ್ತಿಗಳು ಅನುಮಾನಾಸ್ಪದವಾಗಿ ಓಡಾಡುತ್ತಿರುವುದು ಕಂಡು ಬಂದಿತ್ತು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ಸದರಿ ಸ್ಥಳಕ್ಕೆ ಸಿಬ್ಬಂದಿಗಳನ್ನು ಮತ್ತು ಪಂಚರನ್ನು ಕರೆದುಕೊಂಡು ಹೋಗಿದ್ದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ಸದರಿ ವ್ಯಕ್ತಿಗಳ ಬಳಿ ನಕಲಿ ಬಂಗಾರ ಮತ್ತು ಚೀಲ ಸಿಕ್ಕಿದ್ದವು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ಅಕ್ಕಸಾಲಿಗ ಮಹಮ್ಮದ್ ಗೌಸ್ ನಮ್ಮ ಠಾಣೆಯ ಸಾಕಷ್ಟು ಕಳ್ಳತನದ ಪ್ರಕರಣಗಳಲ್ಲಿ ನಮ್ಮ ಪರವಾಗಿ ಸಾಕ್ಷ್ಯ ನುಡಿದಿರುತ್ತಾರೆ ಅಂದರೆ ನನಗೆ ಗೊತ್ತಿಲ್ಲ.

ಸದರಿ ಮಹಮ್ಮದ್ ಗೌಸ್ ರವರು ತಂದಿದ್ದ ಬಂಗಾರ ಪರಿಶೀಲನೆ ಮಾಡುವ ಯಂತ್ರ ಯಾವ ಕಂಪನಿಯದ್ದು ಮತ್ತು ಅದು ಯಾವ ಬಣ್ಣದ್ದು ಇತ್ತು ಎಂದು ಹೇಳಲು ಆಗುವುದಿಲ್ಲ.

ನಕಲಿ ನಾಣ್ಯಗಳ ಪ್ರತ್ಯೇಕ ತೂಕ ಮತ್ತು ಅಳತೆಯನ್ನು ತೆಗೆದುಕೊಂಡಿರುವುದಿಲ್ಲ. ಮು ಮಾ **1** ನ್ನು ಇಟ್ಟಿರುವ ಕೆಂಪು ಬಣ್ಣದ ಚೀಲ ಪ್ಲಾಸ್ಟಿಕ್ ಚೀಲ ಅಲ್ಲ ಅಂದರೆ ಸರಿಯಲ್ಲ. ಸದರಿ ಚೀಲ ಬಟ್ಟೆಯದ್ದು ಅಂದರೆ ಸರಿಯಲ್ಲ. ಮು ಮಾ ನ್ನು ಪಂಚನಾಮೆ ಕಾಲಕ್ಕೆ ಸೀಲ್ ಮಾಡದೇ ಜಪ್ತು ಪಡಿಸಿಕೊಂಡಿರುತ್ತೇವೆ ಅಂದರೆ ಸರಿಯಲ್ಲ. ಮು ಮಾ ನ್ನು ಪ್ರಕರಣಕ್ಕಾಗಿ ನಾನೇ ಸೃಷ್ಟಿಸಿರುತ್ತೇನೆ ಅಂದರೆ ಸರಿಯಲ್ಲ. ಮು ಮಾ ಗೂ ಆರೋಪಿತರಿಗೂ ಯಾವುದೇ ಸಂಬಂಧ ಇಲ್ಲ ಅಂದರೆ ಸರಿಯಲ್ಲ. ನಾನು ದಿನಚರಿಯಲ್ಲಿ ನಮೂದು ಮಾಡಿದ ಮಾಹಿತಿಯನ್ನು ತನಿಖಾಧಿಕಾರಿಗೆ ನೀಡಿಲ್ಲ ಅಂದರೆ ಸರಿಯಲ್ಲ.

ದಿಃ **18-10-2022** ರಂದು ಪಂಚರ ಸಮಕ್ಷಮ ಬಸ್ ನಿಲ್ದಾಣದಲ್ಲಿ ಆರೋಪಿತರ ತಾಬಾದಿಂದ ಮು ಮಾ ಗಳನ್ನು ಜಪ್ತು ಪಡಿಸಿಕೊಂಡು ಪಂಚನಾಮೆ ಮಾಡಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ಮೇಲಾಧಿಕಾರಿಗಳಿಗಂದ ಪ್ರತಿ ತಿಂಗಳು ಇಂತಿಷ್ಟು ಪ್ರಕರಣಗಳನ್ನು ದಾಖಲು ಮಾಡಬೇಕೆಂದು ನಮಗೆ ಆದೇಶ ಇರುತ್ತದೆ ಅಂದರೆ ಸರಿಯಲ್ಲ. ಮೇಲಾಧಿಕಾರಿಗಳ ಒತ್ತಡದಿಂದ ಆರೋಪಿತರ ಮೇಲೆ ಇಲ್ಲ ಸಲ್ಲದ ಆರೋಪಗಳನ್ನು ಮಾಡಿ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಅಂದರೆ ಸರಿಯಲ್ಲ. ಪಂಚನಾಮೆಯನ್ನು ಠಾಣೆಯಲ್ಲಿಯೇ ಸೃಷ್ಟಿಸಿರುತ್ತೇನೆ ಅಂದರೆ ಸರಿಯಲ್ಲ.

**ಸಿ. ಸಿ. ನಂ. 486/2023**

**ಪಿ ಡಬ್ಲ್ಯೂ: 1**

ಫೋಟೋಗಳನ್ನು ಪ್ರಕರಣಕ್ಕೆ ಅನುಕೂಲವಾಗಲು ಒತ್ತಾಯ ಪೂರ್ವಕವಾಗಿ ತೆಗೆಸಿರುತ್ತೇವೆ ಅಂದರೆ ಸರಿಯಲ್ಲ. ಆರೋಪಿತರು ನಕಲಿ ಬಂಗಾರವನ್ನು ಮಾರಾಟ ಮಾಡುತ್ತಿರಲಿಲ್ಲ ಅಂದರೆ ಸರಿಯಲ್ಲ. ಮು ಮಾ ಗಳನ್ನು ಆರೋಪಿತರ ಕಡೆಯಿಂದ ಜಪ್ತು ಪಡಿಸಿಕೊಂಡಿಲ್ಲ ಅಂದರೆ ಸರಿಯಲ್ಲ.

ಆರೋಪಿತರು ಯಾವುದೇ ಅಪರಾಧ ಮಾಡದಿದ್ದರೂ ಸಹ ಠಾಣೆಯ ಅಂಕಿ ಅಂಶಗಳಿಗಾಗಿ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲಾ**.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು
ಹಾಗೂ ಜೆ.ಎಂ.ಎಫ್.ಸಿ., ಹೊಸಪೇಟೆ.